ಧೃವತಾಳ

ದುರಿತವನ ಕುಟಾರಿ ದುರ್ಜನ ಕುಲ ವೈರಿ
ಶರಣಾಗತ ವಜ್ರಪಂಜರ ಕುಂಜರ
ವರ ಸಂರಕ್ಷಕ ಜನ್ಮ ಮರಣರಹಿತ ಮಹಿತ
ಪರಮ ಕರುಣಾಸಿಂಧು ಭಕ್ತಬಂಧು
ಸ್ವರತ ಸ್ವತಂತ್ರ ಜಗದ್ಭರಿತ ಚಿತ್ಸುಖಪೂರ್ಣ
ಹರಿಯೇ ಕ್ಷರಾಕ್ಷರ ಪುರುಷೋತ್ತಮ
ಉರುಗಾಯ ವೈಕುಂಠ ವರ ಮಂದಿರ ಚಂದಿರ
ತರಣಿ ಕೋಟಿ ಸಂಕಾಶ ವಿಮಲ ಕೇಶ
ದುರದೊಳಗರ್ಜುನನ ತುರಗ ನಡೆಸಿದ ಶಂ
ಕರ ಭಯಂಕರ ಲೋಕೈಕ ವೀರ
ನರಸಿಂಹ ನಿನ್ನ ಪಾದಕ್ಕೆರಗಿ ಬೇಡಿಕೊಂಬೆ
ಮೊರೆಹೊಕ್ಕ ದಾಸಗೆ ಬಂದ ಭಯವ ಪರಿ
ಹರಿಸಿ ಸೌಖ್ಯವ ಕರುಣಿಸು ದಯದಿಂದ
ಸರ್ವರಂತರ್ಯಾಮಿ ಲೋಕಸ್ವಾಮಿ
ಸ್ಮರಣೆ ಮಾತ್ರದಿ ಅಜಾಮಿಳಗೆ ಮುಕ್ತಿಯನಿತ್ತೆ
ಅರಿದೇನೋ ನೀನೀಗ ಪೊರೆವುದೆಮ್ಮ
ಸರುವ ಕಾಮದ ಜಗನ್ನಾಥವಿಟ್ಠಲ ಭಕ್ತ
ಪರಿಪಾಲಕನೆಂಬ ಬಿರುದು ನಿನ್ನದಲ್ಲವೆ ||

ಮಟ್ಟತಾಳ

ವಿಧಿಪಿತ ನೀನಲ್ಲದೆ ನಿಧಿಪತಿಗಳುಂಟೆ
ಸದನನಾಗಿ ಇಪ್ಪೆ ನಿನ್ನ ದಾಸರಿಗಾಗಿ
ಮಧುಸೂಧನ ಜಗನ್ನಾಥವಿಟ್ಠಲರೇಯ
ನಿಧನನೆನಿಸಿಕೊಂಬೆ ನಿನ್ನ ದ್ವೇಷಿಗಳಿಗೆ ||

ರೂಪಕತಾಳ

ಮೂರು ಲೋಕಸ್ವಾಮಿ ಸರ್ವಜ್ಞ ಸುಖಪೂರ್ಣ
ಪ್ರೇರಕ ಸಾಕ್ಷಿ ಕಾರಣಕಾರ್ಯ ದೋಷವಿ
ದೂರ ಸದ್ಗುಣಸಾಂದ್ರ ಸಜ್ಜನಾಂಬುಧಿ ಚಂದ್ರ
ಭಾರಕರ್ತ ಜಗಕೆ ನೀನಿರೆ ಎಮ್ಮ ಮನೋರಥ
ಸಲಿಸುವುದೇನಸಾಧ್ಯವೋ ನಿನಗೆ
ಕ್ರೂರಮಾನವರ ಸಂಹಾರಮಾಡಿಸು ಗುರು
ಮಾರುತನಿಂದತಿ ಶೀಘ್ರವಾಗಿ
ನೀರಕ್ಷಿಸೆಂದು ಪ್ರಾರ್ಥಿಸುವೆ ಭಕ್ತರಿಗೆ ಭೂರಿ
ಸಾರ ಭಾಗ್ಯವನಿತ್ತು ಕೃಪೆಮಾಡು ಅನುದಿನ
ಶೂರ ಜಗನ್ನಾಥವಿಟ್ಠಲ ನೀನಲ್ಲದಿ
ನ್ನಾರು ಭಕ್ತರ ಕಾವ ಕರುಣಿಗಳು ಜಗದಿ ||

ಝಂಪೆತಾಳ

ಪಿತನಿಂದ ನೊಂದ ಪ್ರಹ್ಲಾದನನು ಕಾಯ್ದೆ ದೇ
ವತೆಗಳಿಗೆ ಬಂದ ಭಯ ಪರಿಹರಿಸಿದೆ ದ್ರೌ
ಪದಿಯ ಮೊರೆ ಕೇಳಿ ದಿವ್ಯಾಂಬರವ ಕರುಣಿಸಿದೆ
ಕ್ಷಿತಿಜನಾಲಯದಿ ಬಳಲುವ ಬಾಲೆಯರ ದ್ವಾರಾ
ವತಿಗೆ ಕರೆದೊಯ್ದು ಒಲಿದವರ ಪೋಷಿಸಿದೆ ಮಾ
ರುತಿಯ ಕರದಿಂ ಬೃಹದ್ರುತಕುವರನ ಕೊಲಿಸಿ

ಪೃಥಿವಿಪರ ಬಿಡಿಸಿ ಪಾಲಿಸಿದೆ ಕರುಣದಲಿ ಕುರು
ಪೃಥನದೊಳ್ ಪಾಂಡವರ ಗೆಲಿಸಿ ಕೀರ್ತಿಯ ಪಡೆದೆ
ಶತಮೋದನಸ್ತ್ರದಿಂದಲಿ ಗರ್ಭಧೊಳಗೆ ಪೀ
ಡಿತನಾದ ಶಿಶುಪರೀಕ್ಷಿತನ ಸಂತೈಸಿದೆ
ಶಿತಿಕಂಠಗೊಲಿದು ಸಾಯಕನಾಗಿ ಮುಪ್ಪುರದ
ಸತಿಯರನೊಲಿಸಿ ಕೀರುತಿಯಿತ್ತೆ ಭಕ್ತನಿಗೆ
ಮಿತಿಯುಂಟೆ ನಿನ್ನ ಕರುಣಕೆ ದೇವಪತಿ ಸಾಂ
ಪ್ರತ ಬೇಡಿಕೊಂಬೆ ಬಿನ್ನಪ ಕೇಳಜಸ್ರ ಸಂ
ಸ್ತುತಿಪ ಭಕುತರ ಮನೋರಥವ ಪೂರೈಸು ಸು
ವ್ರತನಾಮ ಶ್ರೀಜಗನ್ನಾಥವಿಟ್ಠಲ ಭಾಗ
ವತ ಜನರ ಪ್ರಿಯ ನೀನೇ ಗತಿ ಎಮಗೆ ಇಹಪರದಿ ||

ತ್ರಿಪುಟತಾಳ

ನೀ ಸಲಹಲಿನ್ನಾರು ಮೂಲೋರ್ಕದೊಳು ಬಂದ
ಕಸರು ನಿನಗೆ ಸಮರ್ಪಕ ಕಾಯ ಮ
ಹಾ ಸುಖದಿ ನಡೆಸುವರು ನಿರುತದಿ ಲಕ್ಷ್ಮೀ
ದಾಸಿಯೆಂದನಿಪಳು ನಿನ್ನರಮನೆಯಲ್ಲಿ
ದೇಶ ಕಾಲ ಗುಣಕರ್ಮಾದಿಗಳು ನಿನಗಾ
ವಾಸಕೆ ಯೋಗ್ಯವಾದ ಸ್ಥಾನವೆನಿಪವು
ಈಶ ಲೋಕಕೆ ಲೇಶಾಯಾಸ ಕಾಣೆನೊ ಕರು
ಣಾ ಸಮುದ್ರನೆ ಒಲಿದು ಎಮ್ಮ ಮನದ ಅಭಿ
ಲಾಷೆ ಪೂರೈಸೆಂದು ಬೇದಿದೆನೊ ವೇದ
ವ್ಯಾಸ ಕೀತಗೆ ಒಲಿದು ಕೊಟ್ಟು ಮಹಾಸಿಂ
ಹಾಸನವನ್ನೇರಿಸಿ ನೀ ಪೊರೆದೆಯೊ ಪ
ರಾಶರಾತ್ಮಜ ನಿನ್ನ ಗುಣಗಳ ಬಣ್ಣಿಸೆ
ನಾ ಸಮರ್ಥನೆ ಎಂದೆಂದಿಗಾದರು ದೇವ
ನೀ ಸುಲಭನೆಂದಾಶ್ರಯಿಸಿಂದು ನಾ ಬಿ
ನ್ನೈಸಿದೆನೊ ಈ ರೀತಿಯಲ್ಲಿ ಸರು
ವಾಸುನಿಲಯ ಶ್ರೀಜಗನ್ನಾಥವಿಟ್ಠಲರೇಯ
ಈಸು ಮಾತುಗಳೇಕೆ ಮನ್ಮನದ
ಆಶೆ ಪೂರ್ತಿಯ ಮಾಡಿ ಎಮ್ಮನು ದಯದಿ ಉ
ದಾಸಿಸದೆ ಅನುದಿನ ನೋಳ್ಪುದು ||

ಅಟ್ಟತಾಳ

ನಿಗಮತತಿಗಳಿಗೆ ವೇದ್ಯವಾಗದ ನಿನ್ನ
ಅಗಣಿತ ಮಹಿಮೆ ಲಕುಮಿ ಬೊಮ್ಮ ಭವಾ
ದಿಗಳು ತಾವರಿಯರು ಸಾಕಲ್ಯದಿಂದ ಜೀ
ವಿಗಳಿಗೆ ಗೋಚರಿಸುವುದೆ ನಿನ್ನ ರೂಪ
ಭಗವಂತ ನೀನೆ ದಯಾಳುವೆಂದರಿದು ನಾ
ಪೊಗಳಿದೆನೊ ಯಥಾಮತಿಯೊಳಗೆ ಲೇಶ
ಬಗೆಯದಿರೆನ್ನಪರಾಧಕೋಟಿಗಳನ್ನು
ಜಗತೀಪತಿ ತನ್ನ ಮಗುವಿನ ತೊದಲು ಮಾ
ತುಗಳನೆ ಕೇಳಿ ತಾ ನಗುತ ಕಾಮಿತ ಬಗೆ
ಬಗೆಯಿಂದ ಪೂರ್ತಿಸಿ ಮಿಗೆ ಹರುಷದಿಂದ
ಬಿಗಿದಪ್ಪಿ ಮೋದಿಪನಲ್ಲದೆ ಶಿಶುವನು
ತೆಗೆದು ಬಿಸುಟು ಮತ್ತೆ ಪಗೆಗೊಂಬನೇನೋ ತ್ರೈ
ಯುಗನೆ ಬಿಡದೆ ಪಾಡಿಪೊಗಳುವ ದಾಸಗೀ

ಬಗೆ ಬಡತನವೇಕೆ ಸಂಸಾರದೊಳಗೆ ನಾ
ಲ್ಮೊಗನಯ್ಯ ಅರ್ಥಕಾಮಗಳೊಳಗಿಪ್ಪ ಈ
ರ್ವಗೆ ರೋಪವೊಂದಾಗೆ ಆವುದಸಾಧ್ಯವೋ
ಗಗನ ಭೂಪಾತಾಳ ವ್ಯಾಪ್ತರೂಪಗೆ ಕರ
ಮುಗಿವೆ ಗೋಚರಿಸೆಮ್ಮ ಧೃಗುಯುಗಗಳಿಗಿಂದು
ಯುಗವರ್ತ ಶ್ರೀಜಗನ್ನಾಥವಿಟ್ಠಲ ನರ
ಮೃಗನಾಗಿ ಕಂಬದಿಂದೊಗೆದು ಬಂದೊದಗಿದೆ ||

ಆದಿತಾಳ

ಶ್ರೀನಿಧಿ ಪ್ರತಿದೇಹಂಗಳಲ್ಲಿ ಗತಿ
ನೀನಲ್ಲದೆ ಎಮಗಾರಿಹಪರದಲ್ಲಿ
ಆ ನಳಿನಭವಭವಾಧ್ಯನಿಮಿಷರ ನಿ
ಜಾನಂದವರಿತು ಫಲಗಳ ಕೊಡುವ ಮ
ಹಾನುಭಾವ ಎಮ್ಮಭಿಮತ ಸಲಿಸುವು
ದೇನಚ್ಚರಿ ನಿನ್ನರಿಸಿ ಲಕುಮಿ ಕಡೆ
ಗಾಣಳು ಪರಮೈಶ್ವರ್ಯದ ಪ್ರಾಂತ ಚಿ
ದಾನಂದಮಯನೆ ಪ್ರಣತರ ಅಡಿಕಾ
ರಾನುಸಾರ ನಡೆಸುವ ಮುಖ್ಯ
ಪ್ರಾಣಪತಿಗೆ ನೂತನ ವಿಜ್ಞಾಪನ
ವೇನುಂತಿನ್ನನುದಿನದಲಿ ಮಾಳ್ಪುದು
ಮಾನದ ಗುರುಜಗನ್ನಾಥವಿಟ್ಠಲ ಕರು
ಣಾನಿಧಿ ಸರ್ವದ ಸುಲಭ ನೀನಲ್ಲವೆ ||

ಜತೆ

ಚತುಲ ಕಾರ್ಯಗಳ ಸಂಘಟನೆ ಮಾಡುವೆಯೊ ನಿ
ಷ್ಕುಟಿಲ ಜಗನ್ನಾಥವಿಟ್ಠಲ ದೇವೋತ್ತಮ ||